# ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಚಿತ್ರದುರ್ಗ ಮಾ. 8 - ಮಹಿಳೆ ಎಂಬ ಶಬ್ದದಲ್ಲಿ ಇಳೆ ಇದೆ, ಮಳೆ ಇದೆ. ಇವೆರಡೂ ಸೇರಿದರೆ ಮಹಿಳೆ. ಇವಿಲ್ಲದೆ ಜಗತ್ತಿಗೆ ಅಸ್ತಿತ್ವವೇ ಇಲ್ಲ. ಹಾಗಾಗಿ ಮಹಿಳೆ ಎಂಬ ಪದ ಸಾರ್ಥಕವಾದುದು ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಅಭಿಪ್ರಾಯಪಟ್ಟರು.

ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದಲ್ಲಿ ಎಸ್.ಜೆ.ಎಂ. ವಿದ್ಯಾಪೀಠ ಇವರ ಸಹಯೋಗದೊಂದಿಗೆ ಆಯೋಜಿಸಲಾಗಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀಗಳು, ಬಸವಣ್ಣನವರು ಹೆಣ್ಣುಮಕ್ಕಳಿಗೆ ಎಲ್ಲ ರೀತಿಯ ಸ್ವಾತಂತ್ರ್ಯ ಕೊಟ್ಟರು. ನೀಲಾಂಬಿಕೆಯವರು ಬಸವಣ್ಣನವರಿಗೆ ವಿಚಾರಪತ್ನಿಯಾದೆನು ಎಂದು ಹೇಳುತ್ತಾರೆ. ಮಹಿಳೆಯರು ಹೆಚ್ಚು ಏಕಾಗ್ರತೆಗೆ ಒಳಗಾಗುತ್ತಾರೆ. ಪರೀಕ್ಷಾ ಫಲಿತಾಂಶಗಳಲ್ಲಿ ಮಹಿಳೆಯರದು ಮೇಲುಗೈ. ಇರುವ ಏಕಾಗ್ರತೆ ಬೆಳಸಿಕೊಳ್ಳಬೇಕು. ಮಹಿಳೆಯರಲ್ಲಿ ಮಮತೆ ಎದ್ದು ಕಾಣುತ್ತದೆ. ಪುರುಷ ಜಗತ್ತನ್ನು ಆಳಬಹುದು. ಜಗತ್ತನ್ನು ಆಳುವಂತಹ ವ್ಯಕ್ತಿಯನ್ನು ಮಹಿಳೆ ಆಳುತ್ತಾಳೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಶ್ರೀಮತಿ ಕವಿತಾ ಎಸ್.ಮನ್ನಿಕೇರಿ ಮಾತನಾಡಿ, ಮೊದಲು ನಾವು ಹೆಣ್ಣುಮಕ್ಕಳನ್ನು ಗೌರವಿಸಬೇಕಿದೆ. ಹೆಣ್ಣನ್ನು ಎಲ್ಲರು ಗೌರವದಿಂದ ಕಂಡಾಗ ಸಮಾಜದಲ್ಲಿ ಅಪರಾಧಗಳು ಕಡಿಮೆಯಾಗುತವೆ ಎಂದರು.

ಪದ್ಮಶ್ರೀ ಪುರಸ್ಕøತ ಹೆಸರಾಂತ ವೈದ್ಯೆ ಡಾ ಕಾಮಿನಿರಾವ್ ಮಾತನಾಡಿ, ಈ ಮೊದಲು ಗಂಡುಮಕ್ಕಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದ್ದರು. ಈಗ ಹೆಣ್ಣುಮಕ್ಕಳಿಗೆ ಹೆಚ್ಚು ಪ್ರೋತ್ಸಾಹ ನೀಡುತ್ತಿದ್ದಾರೆ. ಇಂದು ಹೆಣ್ಣುಮಕ್ಕಳು ಹೆಚ್ಚು ವಿದ್ಯಾರ್ಜನೆ ಮಾಡುತ್ತಿದ್ದಾರೆ. ಒಂದು ಹೆಣ್ಣು ನೌಕರಿ ಸೇರಿಕೊಂಡರೆ ಇಡೀ ಕುಟುಂಬ ಸುಶಿಕ್ಷಿತವಾಗುತ್ತದೆ. ಗಂಡು ಮತ್ತು ಹೆಣ್ಣಿಗೆ ಬುದ್ಧಿ ಹೆಚ್ಚು ಕಡಿಮೆ ಇರುವುದಿಲ್ಲ. ಎಲ್ಲರಿಗೂ ಒಂದೇ ಇರುತ್ತದೆ. ಹೆಣ್ಣಿಗೆ ಪ್ರೋತ್ಸಾಹ ಸಿಕ್ಕಷ್ಟು ಮುಂದೆ ಬರುತ್ತಾರೆ. ಬದುಕಿನಲ್ಲಿ ಪ್ರತಿಯೊಬ್ಬರು ಒಂದು ಗುರಿ ಇಟ್ಟುಕೊಳ್ಳಬೇಕು. ಅದನ್ನು ತಲುಪಬೇಕು. ಅವಕಾಶಗಳು ಸಾಕಷ್ಟು ಇವೆ. ಅವುಗಳನ್ನು ಬಳಸಿಕೊಳ್ಳುವ ಪ್ರಯತ್ನ ಮಾಡಬೇಕು ಎಂದರು.

ಎಸ್.ಜೆ.ಎಂ. ಪಾಲಿಟೆಕ್ನಿಕ್ ಕಾಲೇಜಿನ ಪ್ರಾಧ್ಯಾಪಕಿ ಸವಿತಾ ಎಸ್. ಮಾತನಾಡಿ, ಪ್ರಪಂಚದ ಕ್ರಾಂತಿಗಳಲ್ಲಿ ಮಹಿಳಾ ಕ್ರಾಂತಿಯು ಒಂದು. ಅಮೆರಿಕ ಇನ್ನೂ ಸಹ ಮಹಿಳಾ ಅಧ್ಯಕ್ಷರನ್ನು ಕಂಡಿಲ್ಲ. ಆದರೆ ಭಾರತದಲ್ಲಿ ಮಹಿಳೆಯರಿಗೆ ಅನೇಕ ಸ್ಥಾನಮಾನಗಳನ್ನು ಕೊಟ್ಟಿದ್ದಾರೆ.

ಇಂದಿರಾಗಾಂಧಿ, ಪ್ರತಿಭಾ ಪಾಟೀಲ ಮೊದಲಾದವರು ಭಾರತದ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಎಲ್ಲ ಕ್ಷೇತ್ರಗಳಲ್ಲಿ ಮಹಿಳೆ ಮುಂದೆ ಬರುತ್ತಿದ್ದಾಳೆ ಎಂದು ಹೇಳಿದರು.

ಕು| ಭೂಮಿಕಾ ಮಾತನಾಡಿದರು. ಜಿ.ಪಂ. ಕಾರ್ಯನಿರ್ವಹಣಾಧಿಕಾರಿ ಡಾ. ನಂದಿನಿದೇವಿ ಕೆ., ನಗರಸಭೆ ಅಧ್ಯಕ್ಷೆ ಶ್ರೀಮತಿ ತಿಪ್ಪಮ್ಮ ವೆಂಕಟೇಶ್ ವೇದಿಕೆಯಲ್ಲಿದ್ದರು.

ಜಮುರಾ ಕಲಾಲೋಕದ ತೋಟಪ್ಪ ಉತ್ತಂಗಿ ಮತ್ತು ಸಂಗಡಿಗರಿಂದ ವಚನ ಗಾಯನ ನಡೆಯಿತು. ಸಹಾಯಕ ಪ್ರಾಧ್ಯಾಪಕಿ ಅಪೂರ್ವ ಜಿ.ಓ. ಸ್ವಾಗತಿಸಿದರು. ಶ್ರೀಮತಿ ವಿಜಯಲಕ್ಷ್ಮಿ ಹಿರೇಮಠ ನಿರೂಪಿಸಿದರು.






ಮತ್ತು
ಎಸ್.ಜೆ.ಎಂ. ವಿದ್ಯಾಪೀಠ (ರಿ.)
ಚಿತ್ರದುರ್ಗ – ಇವರ ಸಹಯೋಗದಲ್ಲಿ
ಅಂತಾರಾಷ್ಟ್ರೀಯ


ಮತ್ತು
ಎಸ್.ಜೆ.ಎಂ. ವಿದ್ಯಾಪೀಠ (ರಿ.)
ಚಿತ್ರದುರ್ಗ – ಇವರ ಸಹಯೋಗದಲ್ಲಿ
ಅಂತಾರಾಷ್ಟ್ರೀಯ
ಮಹಿಳಾ ದಿನಾಚರಣೆ
08-03-2022, ಮಂಗಳವಾರ ಬೆಳಗ್ಗೆ 10.30ಕ್ಕೆ
ಸ್ಥಳ : ಅನುಭವ ಮಂಟಪ, ಶ್ರೀ ಮುರುಘಾಮಠ,
ಅಧ್ಯಕ್ಷತೆ : ಡಾ. ಶಿವಮೂರ್ತಿ ಮುರುಘಾ